ಅನ್ಯಾಯವನ್ನು ಪರಿಶೀಲನೆ ಮಾಡಿ ಸದನಕ್ಕೆ ವರದಿಕೊಡಲಿ. ಇಲ್ಲದಿದ್ದರೆ ಅಧಿಕಾರಿಗಳನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಖರ್ಗೆಯವರು ಹೇಳಿದ ಹಾಗೆ ಈಗ ಈ ಸದನದಲ್ಲಿ ಇಬ್ಬರು ಸದಸ್ಯರು ಹರಿಜನ ಮೇಲೆ ದೂರು ತಂದರು. ಒಟ್ಟಿನಲ್ಲಿ ಇದು ಸತ್ಯಕ್ಕೆ ದೂರವಾದುದು. ಸುಮ್ಮನೆ ಏನಾದರೂ ಮಾಡಿ ಸದನದ ಗಮನವನ್ನು ಸೆಳೆದಿದ್ದಾರೆ, ಡೋಂಟ್ ಕೇರ್ ಫಾರ್ ಇಟ್ ಅಂದ ಹಾಗೆ ಆಯಿತು. ಅವರ ತಪ್ಪಿದ್ದರೆ ಇತರ ಶಾಸಕರು ಹರಿಜನರಿಗೆ ಅವಮಾನ ಮಾಡಿದರು ಎಂದರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಸದನಕ್ಕೆ ರಿಪೋರ್ಟ್ ಒದಗಿಸಬೇಕು. ಇದನ್ನು ಅವರು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು. ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಿ ಸದನಕ್ಕೆ ವರದಿ ಸಲ್ಲಿಸಬೇಕು.

ಶ್ರೀ ಬಿ. ಆರ್. ನೀಲಕಂಠಪ್ಪ —ಇಲ್ಲಾಖಾ ವಿಚಾರಣೆ ನಮಗೆ ಬೇಕಾಗಿಲ್ಲ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಚಾರಣೆ ಮಾಡಿಸಲು ಎಲ್ಲರ ಒಪ್ಪಿಗೆ ಇದೆ. ಈ ರೀತಿಯಾಗಿ ಹೆಡ್ಮೂಲ್ಸ್ ಕ್ಯಾಸ್ಟ್ ಹೆಣ್ಣು ಮಕ್ಕಳ ಹೆಸರನ್ನು ಬಳಸಿ ದುರುಪಯೋಗ ಮಾಡುವುದು ಬೇಡ. ಸದನದಲ್ಲಿ ಪದೇ ಪದೇ ಅದನ್ನು ಹೇಳಿ ಅವರಿಗೆ ಬೇಕಾದುದನ್ನು ಸಾಧಿಸಿಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ತಾವು ವಿಚಾರಣೆ ಮಾಡಿಸಿ ಸದನದ ಮುಂದೆ ವರದಿಯನ್ನು ಇಡಿ. ಅದಕ್ಕಾಗಿ ಮೇಲಧಿಕಾರಿಗಳನ್ನು ಕಳುಹಿಸಿ ವಿಚಾರಣೆ ನಡೆಸಿ ವರದಿ ಇಡಿ.

ಅಧ್ಯಕ್ಷರು.—ಗೃಹ ಸಚಿವರು ಹೇಳುತ್ತಾರೆ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಲ್ಲಾರಿಗೌಡ ಪಾಟೀಲರ ಗಮನ ಸೆಳೆಯುವ ಸೂಚನೆಗೆ ಉತ್ತರ ಹೇಳುತ್ತಾರೆ.

ಶ್ರೀ ಬಿ. ಸ್ವಾಮಿರಾವ್.—ಅಧಿಕಾರಿಗಳು ತಯಾರಿಸಿದ ವರದಿ ಮೇಲೆ .....

ಶ್ರೀ ಬಿ.ಎ. ಜೀವಿಜಯ.—ಜವಾಬ್ದಾರಿಯುತವಾದ ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿದ್ದೇವೆ. ನಮ್ಮ ಅಧಿಕಾರಿಗಳ ಬಗ್ಗೆ ನನಗೆ ಗೊತ್ತು. ನಾನು ಬೇಜವಾಬ್ದಾರಿಯುತವಾಗಿ ಮಾಡುತ್ತಿಲ್ಲ

ಅಧ್ಯಕ್ಷರು.—ಈಗ ಮುಂದಕ್ಕೆ ಹೋಗೋಣ.

ಬೆಳಗಾವಿಯ ಬಾಲಕೃಷ್ಣ ಚಿತ್ರಮಂದಿರದಲ್ಲಿ ಬಾಂಬ್ ಆಸ್ಫೋಟಿಸಿದ ಬಗ್ಗೆ ಮಂತ್ರಿಯವರ ಹೇಳಿಕೆ.—

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಶ್ರೀ ಮಲ್ಲಾರಗೌಡ ಎಸ್. ಪಾಟೀಲರು ದಿನಾಂಕ ೨೨-೧-೧೯೮೬ ರಂದು ಬೆಳಗಾವಿಯ ಬಾಲಕೃಷ್ಣ ಚಿತ್ರಮಂದಿರದಲ್ಲಿ ನಡೆದ ಬಾಂಬ್ ಆಸ್ಫೋಟನೆಯ ಬಗ್ಗೆ ಕಳುಹಿಸಿದ ಸೂಚನೆಗೆ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಾಂಕ ೨೨-೧-೧೯೮೬ ರಂದು ಮಧ್ಯಾಹ್ನ ಸುಮಾರು ೩-೩೦ಕ್ಕೆ ಬೆಳಗಾವಿ ನಗರದಲ್ಲಿ ಕಿರ್ಲೋಸ್ಕರ್ ರಸ್ತೆಯಲ್ಲಿರುವ ಬಾಲಕೃಷ್ಣ ಸಿನಿಮಾ ಮಂದಿರದ ಶೌಚಾಗಾರದಲ್ಲಿ ಒಂದು ಸಣ್ಣ ಆಸ್ಫೋಟನೆ ಘಟನೆ ನಡೆದಿದೆ. ಈ ಸಮಯದಲ್ಲಿ ಮ್ಯಾಟಿನಿ ಪ್ರದರ್ಶನ ನಡೆಯುತ್ತಿದ್ದುದರಿಂದ ಸಿನಿಮಾ ಮಂದಿರಕ್ಕೆ ಬಂದ ಎಲ್ಲಾ ವ್ಯಕ್ತಿಗಳು ಚಿತ್ರಮಂದಿರದಲ್ಲಿ ಒಳಗೆ ಸುರಕ್ಷಿತರಾಗಿದ್ದರು. ಈ ಶೌಚಾಗಾರವು ಕಟ್ಟಡದ ೨ನೇ ಮಹಡಿಯಲ್ಲಿದ್ದು ಈ ಕಟ್ಟಡದಲ್ಲಿ ಶ್ರೀ ಕೃಷ್ಣ ಮತ್ತು ಬಾಲಕೃಷ್ಣ ಎಂಬ ಎರಡು ಚಿತ್ರ ಮಂದಿರಗಳಿವೆ. ಕೃಷ್ಣ ಚಿತ್ರಮಂದಿರವು ಕಟ್ಟಡದ ನೆಲ ಅಂತಸ್ತಿನಲ್ಲಿದ್ದು ಮತ್ತು ಈ ಪ್ರದೇಶವು ದಟ್ಟ ಜನಸಂದಣಿಯಿಂದ ಕೂಡಿದೆ. ಸುಮಾರು ೨೦೦ ಮೀಟರುಗಳ ಪರಿಮಿತಿಯಲ್ಲಿ ೧೨ ಚಿತ್ರಮಂದಿರಗಳು ಈ ಪ್ರದೇಶದಲ್ಲಿ ಇರುತ್ತವೆ. ಬೆಳಗಾವಿಯ ಆರಕ್ಷಕ ಅಧೀಕ್ಷಕರು ವಿಷಯ ತಿಳಿದ ಕೂಡಲೇ ಶ್ವಾನ ದಳದೊಂದಿಗೆ ಸ್ಥಳಕ್ಕೆ ಧಾವಿಸಿ, ಆಸ್ಫೋಟನೆ ಬಗ್ಗೆ ಮಾಹಿತಿ ಇದ್ದ ಎಂಎಲ್ಆರ್ಸಿಯ ಒಬ್ಬ ಬ್ರಿಗೆಡಿ

ಯವರನ್ನು ಕೂಡ ಕರೆಸಿಕೊಂಡರು. ಈ ಆಸ್ಫೋಟನೆಯು ಪರಿಣಾಮವಾಗಿ ಶೌಚಾಗಾರದ ಕಿಟಕಿಗಳ ಗಾಜುಗಳು ಒಡೆದವು. ಮತ್ತು ಬಾಗಿಲಿನ ಹಲಗೆಗಳು ಹೊರಗೆ ಎಸೆಯಲ್ಪಟ್ಟವು. ಗೋಡೆಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗಿಲ್ಲ. ಈ ಘಟನೆಯಿಂದ ರೂಪಾಯಿಗಳ ಲೆಕ್ಕದಲ್ಲಿ ೫೦೦ ರೂಪಾಯಿಗಳಿಗಿಂತ ಹೆಚ್ಚು ಹಾನಿ ಸಂಭವಿಸಿರಲಾರದು ಬ್ರಿಗೆಡಿಯರ್‌ರವರ ಅಭಿಪ್ರಾಯದಂತೆ ಆಸ್ಫೋಟನೆಗೆ ಉಪಯೋಗಿಸಲಾದ ವಸ್ತು ಬಾಂಬಿನಂತೆ ಕಂಪು ಬರುವುದಿಲ್ಲ. ಆದರೆ ಈ ವಸ್ತು ಬಯಲ್ಲಿರುವ ಕಲ್ಲು ಮತ್ತು ಬಂಡೆಗಳನ್ನು ಒಡೆಯಲು ಉಪಯೋಗಿಸುವ ಆಸ್ಫೋಟಕ ವಸ್ತು ಎಂದು ತಿಳಿದು ಬಂದಿದೆ. ಶೌಚಾಗಾರದ ಸುತ್ತಮುತ್ತು ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪೋಲೀಸು ಶ್ವಾನಗಳು ಈ ಘಟನೆ ನಡೆದ ಸ್ಥಳದಿಂದ ವಾಸನೆ ಹಿಡಿದು ಶಿವ ಭವನವೃತ್ತಕ್ಕೆ ಹೋಗಿ ಅಲ್ಲಿ ನಿಂತು ಕೊಂಡವು. ಈ ಆಸ್ಫೋಟನೆ ನಡೆದ ಸ್ಥಳದಲ್ಲಿ ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರು ಪಾಲಿಥಿನ್ ಕಾಗದ ಅಲ್ಯೂವಿನಿಯಂ ಚೂರುಗಳು ಮತ್ತು ಪ್ಲೆಸ್ಟ್ರಿಕ್ ಆವ್ಲ್ ಇವು ಬಿದ್ದಿದ್ದವು. ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಅಪರಾಧ ಸಂ. ೯೭೬ ಇಂಡಿಯನ್ ಎಕ್ಸ್‌ಪ್ಲೋಸಿವ್ಸ್ ಸಬ್‌ಸ್ಟೆನ್ಸ್ ಅಧಿನಿಯಮ ೧೯೦೮ ಪ್ರಕರಣ ೪ರನ್ವಯ ದಾಖಲಿಸಿದ ಮೊಕದ್ದಮೆಯ ತನಿಖೆ ನಡೆಸುತ್ತಿದ್ದಾರೆ. ಈ ಘಟನೆಯು ವಿಧಾನಸಭಾ ಸದಸ್ಯರಾದ ಶ್ರೀ ಆರ್ ಎಸ್. ಮಾನೆಯವರನ್ನು ಬೆಂಗಳೂರಿನಲ್ಲಿ ಅವಘಾತ ಗೊಳಿಸಲಾಯಿತು ಎಂದು ಆಪಾದಿಸಲ್ಪಟ್ಟ ಪ್ರಕರಣದ ಬಗ್ಗೆ ಪ್ರತಿಭಟನೆ ನಡೆಸಲು ಎಂಇಎಸ್ ಕಾರ್ಯಕರ್ತರು ದಿನಾಂಕ ೨೨-೧-೧೯೮೬ ರಂದು ಆಚರಿಸಿದ ಬೆಳಗಾವಿ ಬಂದ್ ಸಮಯದಲ್ಲಿ ನಡೆದಿದೆ. ತನಿಖೆಯ ಸಮಯದಲ್ಲಿ ಈ ಕೆಳಕಂಡ ನಾಲ್ವರು ಆಪಾದಿತರನ್ನು ಮೇಲೆ ನಮೂದಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ ೨೩-೧-೧೯೮೬ ರಂದು ಬಂಧಿಸಲಾಗಿದೆ.

೧ ಶ್ರೀ ದೌಲತ್ ಮನೋಹರ್ ಮೋರೆ, ೨೩ ವರ್ಷ ಕಂಗ್ರಾಲ್‌ಗಲ್ಲಿ

೨ ನರೇಶ್ ಭೊನ್ನಪ್ಪ ಹಂಡ್ರೆ, ೧೯ ವರ್ಷ ಕಂಗ್ರಾಲ್‌ಗಲ್ಲಿ

೩ ಶೇಖರ್ ದತ್ತಾತ್ರೇಯ ಅಂಗಡಿ, ೩೦ ವರ್ಷ ಗೊಂಡಾಲಿ ಗಲ್ಲಿ

೪ ಜೀವನ ಮಾಧವ ರಾವ್ ಹಳದ್‌ಕರ್, ೨೮ ವರ್ಷ ಕೊತವಾಲ ಗಲ್ಲಿ

ಈ ಘಟನೆಯಲ್ಲಿ ವಶಪಡಿಸಿಕೊಳ್ಳಲಾದ ಮುರಿದ ಬಾಗಿಲಿನ ಹಲಗೆಯ ಚೂರುಗಳು, ಕನ್ನಡ ಮತ್ತು ಮರಾಠಿ ವೃತ್ತ ಪತ್ರಿಕೆಗಳ ಚೂರುಗಳು, ಕಪ್ಪು ಬಣ್ಣದ ಪುಡಿಯಿಂದ ಆವೃತ್ತವಾದ ಪಾಲಿಶ್ ಮಾಡಿದ ನೆಲಕ್ಕೆ ಹಾಸುವ ಹೆಂಚಿನ ಚೂರುಗಳು ಶೌಚಾಗಾರದ ಒಡೆದ ಬೇಸಿನ ಚೂರುಗಳು ಮತ್ತು ಪಾಲಿಥಿನ್ ಕಾಗದದ ಚೂರುಗಳು ಮುಂತಾದ ವಸ್ತುಗಳನ್ನು ಮಂಗಳೂರಿಗೆ ಸ್ಫೋಟಕಗಳ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲಾಗುತ್ತಿದೆ ತನಿಖೆ ಸಮಯದಲ್ಲಿ ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಎಂಹೆಚ್ ಎಲ್ ೬೭೫೩ ಸಂಖ್ಯೆಯ ಒಂದು ಆಟೋದಲ್ಲಿ ಬಚ್ಚಿಡಲಾಗಿದ್ದ ಒಂದು ಸ್ಟೈನ್‌ಲೆಸ್ ಸ್ಟೀಲ್ ಭರಣಿಯಲ್ಲಿಟ್ಟಿದ್ದ ಜಿಲೆಟಿನ್ ಅಚ್ಚಾದಿತ ಸ್ಫೋಟಕ ವಸ್ತುಗಳನ್ನು ಒಳಗೊಂಡಿದ್ದ ಒಂದು ಕವರನ್ನು ಹಾಗೂ ಇತರ ಮಿಶ್ರಣಗಳನ್ನು ಆಟೋರಿಕ್ಷಾ ಸಹಿತ ವಶಪಡಿಸಿಕೊಂಡಿದ್ದಾರೆ. ಈ ಆಟೋರಿಕ್ಷಾ ಮತ್ತು ಮೇಲೆ ನಮೂದಿಸಿದ ಸ್ಫೋಟಕ ವಸ್ತುಗಳನ್ನು ಆಪಾದಿತರಾದ ಜೀವನ್ ಮಾಧವರಾವ್ ಹಳದ್‌ಕರ್ ಅವರಿಂದ ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಳ್ಳಲಾದ ಜಿಲೆಟಿನ್ ಇದ್ದ ಸ್ಟೈನ್‌ಲೆಸ್ ಸ್ಟೀಲ್ ಭರಣಿಯನ್ನು ಸಹ ಮಂಗಳೂರಿಗೆ ಸ್ಫೋಟಕ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲಾಗುತ್ತಿದೆ. ಈ ಪ್ರಕರಣದ ತನಿಖೆಯನ್ನು ಬೆಳಗಾವಿ ನಗರದ ವೃತ್ತ ಆರಕ್ಷಕ ನಿರೀಕ್ಷಕರು ಮುಂದುವರಿಸುತ್ತಿದ್ದಾರೆ.

(ii) ಗ್ರಹಣ ಚಿತ್ರಕ್ಕೆ ನೀಡಿದ ಚಿನ್ನದ ಪದಕದಲ್ಲಿ, ಚಿನ್ನದ ಪ್ರಮಾಣ ಕಡಿಮೆ ಇರುವುದು.

ಅಧ್ಯಕ್ಷರು.—ಮಾನ್ಯ ಆಳ್ವ ಅವರೇ, ತಾವು ಎನ್ನೆಯ ದಿವಸವ ೩೩೪ಕ್ಕೆ ಉತ್ತರ ಹೇಳುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರೂ ಮತ್ತು ಮಿತ್ರರಾದ ಉಮಾರಬ್ಬು ಅವರು...